# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಸ್.ಎಂ.ದೇವರಾಜ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ ಮತ್ತಿತರ ಮೂರು ಮಂದಿಯ ವಿರುದ್ಧ ಜಂಟಿ ಇಲಾಖಾ ವಿಚಾರಣೆ – ಆರೋಪಿತರಿಗೆ ದಂಡನೆ ವಿಧಿಸುವ ಬಗ್ಗೆ – ಆದೇಶ.

**ಓದಲಾಗಿದೆ.**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ: ಜಿಪಂಚಿ / ಆ-3 / ಸಿಆರ್-396 / 2007-08, ದಿನಾಂಕ: 21.12.2009 ಮತ್ತು 18.07.2011
2. ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 21 ಜಿಪಅ 2010, ದಿನಾಂಕ: 09.02.2012.
3. ಶ್ರೀ ಎಸ್.ಎಂ.ದೇವರಾಜ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 05.03.2012, ಶ್ರೀ ಎಲ್.ರಾಘವರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 30.03.2012, ಶ್ರೀ ಡಿ.ಚಂದ್ರಶೇಖರ್, ಸಹಾಯಕ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 25.02.2012 ಮತ್ತು ಶ್ರೀ ವಿಠಲ್ ಲಕ್ಕು, ಕಿರಿಯ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 03.04.2012.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಜಿಪಅ 2010, ದಿನಾಂಕ: 04.06.2012.
5. ವಿಚಾರಣಾಧಿಕಾರಿಗಳ ವರದಿ ದಿನಾಂಕ: 23.11.2012.
6. ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್ ದಿನಾಂಕ: 25.03.2013.
7. ಶ್ರೀ ಎಸ್.ಎಂ.ದೇವರಾಜ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಎಲ್.ರಾಘವರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 06.04.2013, ಶ್ರೀ ಡಿ.ಚಂದ್ರಶೇಖರ್, ಸಹಾಯಕ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 02.04.2013 ಮತ್ತು ಶ್ರೀ ವಿಠಲ್ ಲಕ್ಕು, ಕಿರಿಯ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ: 15.04.2013.

**ಪ್ರಸ್ತಾವನೆ:**

ಮೂಡಿಗೆರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಸಂಬಂಧಿಸಿದ ರೋಡ್ ರೋಲರ್ ಸಂಖ್ಯೆ : ಎ.ಜೆ. 289 ವಾಹನವು ದಿನಾಂಕ: 15-03-2005ರಂದು

--2

ಕಾಮಗಾರಿ ನಡೆಯುವ ಸ್ಥಳದಲ್ಲಿ ಅಪಘಾತಕ್ಕೀಡಾದಾಗ ಶ್ರೀ ರಾಜಾರಾಮ್, ಕ್ಲೀನರ್ ಮೃತಪಟ್ಟಿದ್ದು,ಮೃತ ಪತ್ನಿ ಜೆ.ಎಂ.ಎಫ್.ಸಿ.ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಪ್ರಕರಣ ಸಂಖ್ಯೆ: 510/2005ರಲ್ಲಿ ಇಲಾಖಾ ಪರವಾಗಿ ತೀರ್ಪು ನೀಡಿತ್ತು. ಸದರಿ ತೀರ್ಪನ್ನು ಪ್ರಶ್ನಿಸಿ ಮೃತರ ಪತ್ನಿಯು ಲೇಬರ್ ಆಕ್ಸಿಡೆಂಟ್ ಟ್ರಿಬ್ಯುನಲ್, ಚಿಕ್ಕಮಗಳೂರು ಇಲ್ಲಿ ಸಲ್ಲಿಸಿದ್ದ ಪ್ರಕರಣ ಸಂಖ್ಯೆ: 316/2005ರಲ್ಲಿ ನ್ಯಾಯಾಲಯವು ರೂ. 5,82,760/-ಗಳನ್ನು ಹಾಗೂ ಶೇಕಡಾ 6ರಷ್ಟು ಬಡ್ಡಿಯನ್ನು ಒಂದು ತಿಂಗಳೊಳಗಾಗಿ ಪಾವತಿಸಲು ತೀರ್ಪು ನೀಡಿತ್ತು. ಈ ತೀರ್ಪಿನ ವಿರುದ್ಧ ಸರ್ಕಾರದ ಪರವಾಗಿ ಒಂದು ತಿಂಗಳೊಳಗಾಗಿ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ವಿಫಲರಾದ ಕಾರಣ, ನ್ಯಾಯಾಲಯವು ಅರ್ಜಿದಾರರಿಗೆ ಪರಿಹಾರ ಮೊತ್ತವಾಗಿ ರೂ. 7,21,286/-ಗಳನ್ನು ಪಾವತಿಸುವಂತೆ ಆದೇಶಿಸಿದ್ದರ ಮೇರೆಗೆ ಸದರಿ ಮೊತ್ತವನ್ನು ಅರ್ಜಿದಾರರಿಗೆ ಪಾವತಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಈ ಕೆಳಕಂಡ ಅಧಿಕಾರಿ / ನೌಕರರು ಕಾರಣರಾಗಿರುತ್ತಾರೆಂದು ತಿಳಿಸಿ, ಅವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಕೋರಿ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 21.12.2009ರ ಪತ್ರದಲ್ಲಿ ಪ್ರಸ್ತಾವನೆಯನ್ನು ಹಾಗೂ ದಿನಾಂಕ: 18.07.2011ರಲ್ಲಿ ದೋಷಾರೋಪಣಾ ಪಟ್ಟಿ (ಅನುಬಂಧ-1 ರಿಂದ 4)ಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರು ಸಲ್ಲಿಸಿದ್ದರು:-

1. ಶ್ರೀ ಎಸ್.ಎಂ.ದೇವರಾಜ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.
2. ಶ್ರೀ ಎಲ್.ರಾಘವರೆಡ್ಡಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.
3. ಶ್ರೀ ಡಿ.ಚಂದ್ರಶೇಖರ್, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.
4. ಶ್ರೀ ವಿಠಲ್ ಲಕ್ಕು, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.

ಮೇಲ್ಕಂಡ ಅಪಾದಿತ ಅಧಿಕಾರಿ / ನೌಕರರಿಗೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 09.02.2012ರಲ್ಲಿ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಲಾಗಿತ್ತು.

ಅಪಾದಿತ ಅಧಿಕಾರಿ / ನೌಕರರು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕಗಳಂದು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ಅವರುಗಳ ವಿರುದ್ಧ ಮಾಡಲಾದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಆದರೆ, ಸದರಿಯವರುಗಳು ಕರ್ತವ್ಯಲೋಪವೆಸಗಿ ಬೇಜವಾಬ್ದಾರಿತನ ಪ್ರದರ್ಶಿಸಿರುವ ಪರಿಣಾಮವಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದಕ್ಕೆ ಕಾರಣಾರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಇವರುಗಳ ವಿರುದ್ಧ ಮಾಡಲಾದ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದ ಮೂಲಕ ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರನ್ನು ಮಂಡನಾಧಿಕಾರಿಯನಾಗಿ ನೇಮಿಸಲಾಗಿತ್ತು.

--3

ಪ್ರಕರಣದಲ್ಲಿ ಕೂಲಂಕಷವಾಗಿ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ: 23.11.2012ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಸದರಿ ವರದಿಯಲ್ಲಿ ಅಪಾದಿತರುಗಳಾದ ಶ್ರೀ ಎಸ್.ಎಂ.ದೇವರಾಜ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಶ್ರೀ ಎಲ್.ರಾಘವರೆಡ್ಡಿ, ಶ್ರೀ ಡಿ.ಚಂದ್ರಶೇಖರ್, ಸಹಾಯಕ ಇಂಜಿನಿಯರ್ ಮತ್ತು ಶ್ರೀ ವಿಠಲ್ ಲಕ್ಕು, ಕಿರಿಯ ಇಂಜಿನಿಯರ್ ಇವರುಗಳ ವಿರುದ್ಧ ಮಾಡಲಾಗಿರುವ ಆರೋಪಗಳೆಲ್ಲವೂ ರುಜುವಾತಾಗಿರುವುದಿಲ್ಲವೆಂದು ತೀರ್ಮಾನಿಸಿ, ಈ ಎಲ್ಲಾ ಅಪಾದಿತರುಗಳು ನಿರ್ದೋಷಿಗಳೆಂದು ಘೋಷಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ವರದಿಯ ತೀರ್ಮಾನವನ್ನು ನಿರಾಕರಿಸಿ, ಪ್ರಕರಣದಲ್ಲಿನ ಅಪಾದಿತ ಅಧಿಕಾರಿ / ನೌಕರರುಗಳಿಗೆ ಕ್ರಮ ಸಂಖ್ಯೆ (2)ರಲ್ಲಿ ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟೀಸಿನೊಂದಿಗೆ ಲಗತ್ತಿಸಿದ್ದ ಅನುಬಂಧದಲ್ಲಿ ದುರ್ನಡತೆ ಕುರಿತಂತೆ ನೀಡಿದ್ದ ಎಲ್ಲಾ ವಿವರಗಳನ್ನು ಹಾಗೂ ಲಭ್ಯವಿರುವ ದಾಖಲೆಗಳನ್ನು ಗಣನೆಗೆ ತೆಗೆದುಕೊಂಡು ಅಪಾದಿತರುಗಳ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾಗಿವೆ ಎಂದು ಶಿಸ್ತು ಪ್ರಾಧಿಕಾರವಾದ ಸರ್ಕಾರವು ನಿರ್ಣಯಿಸಿ ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ದಿನಾಂಕ: 25.03.2013ರಲ್ಲಿ 2ನೇ ಕಾರಣ ನೋಟೀಸ್‌ಗಳನ್ನು ಜಾರಿ ಮಾಡಲಾಗಿತ್ತು. ಸದರಿ ನೋಟೀಸ್‌ಗಳಿಗೆ ಆರೋಪಿತರು ಸಲ್ಲಿಸಿದ್ದ ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಲಿಖಿತ ಹೇಳಿಕೆಗಳನ್ನು ಒಪ್ಪದೇ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 15 ಶಿವಾನೀ 2012, ದಿನಾಂಕ: 02.07.2012ರನ್ವಯ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ನಾಲ್ಕು ಜನ ಅಪಾದಿತರುಗಳಿಂದ ಸರ್ಕಾರಕ್ಕೆ ಉಂಟಾದ ನಷ್ಟವನ್ನು ಸಮಾನವಾಗಿ ವಸೂಲಿ ಮಾಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ: ಗ್ರಾಅಪ 21 ಜಿಪಅ 2010, ಬೆಂಗಳೂರು</u>**
**<u>ದಿನಾಂಕ : 19.07.2013</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮೂಡಿಗೆರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಸಂಬಂಧಿಸಿದ ರೋಡ್ ರೋಲರ್ ಸಂಖ್ಯೆ: ಎ.ಜೆ.289 ವಾಹನವು ದಿನಾಂಕ: 15.03.2005ರಂದು ಕಾಮಗಾರಿ ನಡೆಯುವ ಸ್ಥಳದಲ್ಲಿ ಅಪಘಾತಕ್ಕೀಡಾದ ಪ್ರಕರಣದಲ್ಲಿ ರೂ. 7,21,286/- (ಏಳು ಲಕ್ಷ ಇಪ್ಪತ್ತೊಂದು ಸಾವಿರ ಎರಡು ನೂರಾ ಎಂಬತ್ತೇಳು ಮಾತ್ರ)ಗಳಷ್ಟು ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾಗಿರುವ ಈ ಕೆಳಕಂಡ ಅಪಾದಿತ ಅಧಿಕಾರಿ / ನೌಕರರುಗಳ ಹೆಸರಿನ ಮುಂದೆ ಸೂಚಿಸಿರುವ ಮೊತ್ತವನ್ನು ರೂ. 8%ರ ಬಡ್ಡಿಯೊಂದಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ-8(iv)ರನ್ವಯ ಅವರುಗಳ ವೇತನದಿಂದ ಸಮಾನ ಕಂತುಗಳಲ್ಲಿ ವಸೂಲಿ ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

| ಕ್ರ.ಸಂ. | ಅಪಾದಿತ ಅಧಿಕಾರಿ / ನೌರರ ಹೆಸರು | ವಸೂಲಿ ಮಾಡಬೇಕಾದ ಮೊತ್ತ ರೂ.ಗಳಲ್ಲಿ. |
|---|---|---|
| 01. | ಶ್ರೀ ಎಸ್.ಎಂ.ದೇವರಾಜ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.<br><br>(ಪ್ರಸ್ತುತ ಪಂ.ರಾ.ಇಂ. ಉಪ-ವಿಭಾಗ, ಯಳಂದೂರು). | ರೂ. 1,80,321.50 |

--4

| | | |
|---|---|---|
| 02. | ಶ್ರೀ ಎಲ್.ರಾಘವರೆಡ್ಡಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.<br><br>(ಪ್ರಸ್ತುತ ಪಂ.ರಾ.ಇಂ. ಉಪ-ವಿಭಾಗ, ಬಳ್ಳಾರಿ). | ರೂ. 1,80,321.50 |
| 03. | ಶ್ರೀ ಡಿ.ಚಂದ್ರಶೇಖರ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.<br><br>(ಪ್ರಸ್ತುತ ಸಹಾಯಕ ಇಂಜಿನಿಯರ್, ಪಂ.ರಾ.ಇಂ. ಉಪ-ವಿಭಾಗ, ತರೀಕೆರೆ). | ರೂ. 1,80,321.50 |
| 04. | ಶ್ರೀ ವಿಠಲ್ ಲಕ್ಕು, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮೂಡಿಗೆರೆ.<br><br>(ಪ್ರಸ್ತುತ ತಾಲ್ಲೂಕ್ ಪಂಚಾಯತ್, ಚಿತ್ತಾಪುರ) | ರೂ. 1,80,321.50 |

ಮೇಲ್ಕಂಡ ಆರೋಪಿತರುಗಳಿಗೆ ಇನ್ನು ಮುಂದೆ ಇಂತಹ ಘಟನೆಗಳಿಗೆ ಅವಕಾಶ ನೀಡದಂತೆ **"ಎಚ್ಚರಿಕೆ"** ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

19.07.13

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರಕ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ / ಜಲಸಂಪನ್ಮೂಲ ಇಲಾಖೆ / ಸಣ್ಣ ನೀರಾವರಿ ಇಲಾಖೆ.
3. ಮುಖ್ಯ ಇಂಜಿನಿಯರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ), ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು **(ಈ ಆದೇಶವನ್ನು ಸಂಬಂಧಪಟ್ಟ ಅಧಿಕಾರಿ / ನೌಕರರಿಗೆ ಜಾರಿಗೊಳಿಸುವಂತೆ ಸೂಚಿಸುತ್ತಾ, ಇಂದಿನಿಂದಲೇ ಜಾರಿಗೆ ಬರುವಂತೆ ಆರೋಪಿತರಿಂದ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವಸೂಲಿ ಮಾಡಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.)**.
6. ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 1242, 8ನೇ ಮುಖ್ಯ ಕ್ರಾಸ್, ಚಂದ್ರಾಲೇಔಟ್, ಬೆಂಗಳೂರು-40.
7. ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.
8. ಅಧೀಕ್ಷಕ ಇಂಜಿನಿಯರ್, ಪಂ.ರಾ.ಇಂ.ವೃತ್ತ, ಮಂಗಳೂರು.
9. ಶ್ರೀ ಎಸ್.ಎಂ.ದೇವರಾಜ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ಉಪ-ವಿಭಾಗ, ಯಳಂದೂರು, ಚಾಮರಾಜನಗರ ಜಿಲ್ಲೆ.

10. ಶ್ರೀ ಎಲ್.ರಾಘವರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ಉಪ-ವಿಭಾಗ, ಬಳ್ಳಾರಿ.
11. ಶ್ರೀ ಡಿ.ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಸಹಾಯಕ ಇಂಜಿನಿಯರ್, ಪಂ.ರಾ.ಇಂ. ಉಪ-ವಿಭಾಗ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.
12. ಶ್ರೀ ವಿಠಲ್ ಲಕ್ಕು, ಕಿರಿಯ ಇಂಜಿನಿಯರ್, ತಾಲ್ಲೂಕ್ ಪಂಚಾಯತ್, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ.
13. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ & ಸಿ).
14. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
15. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ/ ಅಪರ ಕಾರ್ಯದರ್ಶಿ (ಆಡಳಿತ) ಇವರುಗಳ ಅಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
16. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ (ಸೇವೆಗಳು-ಬಿ)
17. ಮೇಲ್ವಿಚಾರಕರು, ಗಣಕಕೇಂದ್ರ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸಲು ಕಳುಹಿಸಿದೆ.
18. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.